# ಕರ್ನಾಟಕ ಸರ್ಕಾರ

ಸಂ. ಕಂಇ 39 ಎಂಆರ್‌ಆರ್ 2005

ಕರ್ನಾಟಕ ಸರ್ಕಾರದ ಸಚಿವಾಲಯ
ಕೆ.ಆರ್.ವೃತ್ತ,
ಬೆಂಗಳೂರು. ದಿನಾಂಕ: 04-02-2009

## <u>ಸುತ್ತೋಲೆ</u>

ವಿಷಯ:- ಅಪ್ಲಿಕೇಶನ್ ಕಿಯೋಸ್ಕ್‌ನಲ್ಲಿ 11-ಇ ನಕ್ಷೆಗಳನ್ನು ಸೂಪರ್‌ವೈಸರ್ ಲಾಗಿನ್‌ನಲ್ಲಿ ಪರಿಶೀಲಿಸುವ ಬಗ್ಗೆ ಕೆಲವು ಹೆಚ್ಚಿನ ಮಾರ್ಪಾಟುಗಳು.

ಉಲ್ಲೇಖ:- ಕರ್ನಾಟಕ ಸರ್ಕಾರದ, ಸುತ್ತೋಲೆ ಸಂಖ್ಯೆ. ಆರ್‌ಡಿ 39 ಎಂಆರ್‌ಆರ್ 2005, ದಿನಾಂಕ 21-02-2009.

******

ಉಲ್ಲೇಖದ ಸುತ್ತೋಲೆಯಲ್ಲಿ ಭೂಮಿ ಅಪ್ಲಿಕೇಶನ್ ಕಿಯೋಸ್ಕ್‌ನಲ್ಲಿ ಸರ್ವೆಸೂಪರ್‌ವೈಸರ್ ಲಾಗಿನ್‌ಗೆ ಖಾತೆ ಬದಲಾವಣೆ ಅರ್ಜಿಗಳಲ್ಲಿ ಬಂದಂತಹ 11-ಇ ನಕ್ಷೆ ಪರಿಶೀಲಿಸುವ ವಿಚಾರವಾಗಿ ಕೆಲವು ಮಾರ್ಗಸೂಚಿಯನ್ನು ಕೊಟ್ಟಿರುತ್ತದೆ. ಇತ್ತೀಚೆಗೆ ಉಡುಪಿ ಜಿಲ್ಲೆಯಲ್ಲಿ ಪ್ರವಾಸಮಾಡಿದ್ದಾಗಿ ಈ ಸಂದರ್ಭದಲ್ಲಿ ಸರ್ವೆಸೂಪರ್‌ವೈಸರ್ ಕೆಲವು ಸಮಸ್ಯೆಗಳನ್ನು ಗಮನಕ್ಕೆ ತಂದಿರುತ್ತಾರೆ. ಇವುಗಳನ್ನು ಪರಿಶೀಲಿಸಿ ಈ ಕೆಳಕಂಡ ಹೆಚ್ಚಿನ ಮಾರ್ಗಸೂಚಿಯನ್ನು ಕೊಟ್ಟಿರುತ್ತದೆ.

1. ಆರ್‌ಟಿಸಿಯಲ್ಲಿ ಭೂಪರಿವರ್ತನೆ ಎಂದು ದಾಖಲಿಸಿದೆ, ಆದರೆ ಆಕಾರ್‌ಬಂದ್‌ನಲ್ಲಿ ಅಲಿನೇಷನ್ ಆದ ಬಗ್ಗೆ ದುರಸ್ಥಿಯಾಗಿರುವುದಿಲ್ಲ.

   ಇಂತಹ ಪ್ರಕರಣಗಳಲ್ಲಿ ಜಮೀನು ಈಗಾಗಲೇ ಭೂಪರಿವರ್ತನೆಯಾಗಿರುತ್ತದೆ. ಆದರೆ ದುರಸ್ಥಿ ಮಾತ್ರ ಆಗಿರುವುದಿಲ್ಲ. ಇಂತಹ ಜಮೀನು ಭುಪರಿವರ್ತಿತ ಜಮೀನಾಗಿರುತ್ತದೆ. ಆದ ಕಾರಣ ಸರ್ವೆಯರ್ ಇಂತಹ ಜಮೀನುಗಳನ್ನು ಭೂ ಪರಿವರ್ತನೆಯಾಗಿದೆ ಎಂದು ದಾಖಲಿಸಬೇಕು.

2. ಆರ್.ಟಿ.ಸಿಯಲ್ಲಿ ಭೂ ಪರಿವರ್ತನೆ ದಾಖಲಿಸಿಲ್ಲ, ಆದರೆ ಆಕಾರ್‌ಬಂದ್‌ನಲ್ಲಿ ಅಲಿನೇಷನ್ ಪೋಡಿ ಆಗಿರುತ್ತದೆ.

   ಇಂತಹ ಪ್ರಕರಣಗಳಲ್ಲಿ ಜಮೀನು ಈಗಾಗಲೇ ಭೂ ಪರಿವರ್ತನೆಯಾಗಿ ದುರಸ್ಥಿಯು ಸಹ ಆಗಿರುತ್ತದೆ. ಆದರೆ ಡಾಟಾ ಎಂಟ್ರಿ ಸಮಯದಲ್ಲಿ ಭೂಪರಿವರ್ತನೆಯ ಬಗ್ಗೆ ದಾಖಲಿಸಿರುವುದಿಲ್ಲ. ಆದ್ದರಿಂದ ಇಂತಹ ಸಂದರ್ಭದಲ್ಲಿ ಸೂಪರ್‌ವೈಸರ್ ಸದರೀ ಜಮೀನು ಭೂಪರಿವರ್ತನೆಯಾಗಿದೆ ಎಂದು ದಾಖಲಿಸಬೇಕು ಮತ್ತು ಇಂತಹ ಪ್ರಕರಣಗಳಲ್ಲಿ ತಂತ್ರಾಂಶವು ಭೂಪರಿವರ್ತನೆಯಾಗಿದ್ದರೂ ಆರ್‌ಟಿಸಿಯಲ್ಲಿ

ದಾಖಲಾಗದ ಕಾರಣ ಆರ್‌ಟಿಸಿಯಲ್ಲಿ ತಿದ್ದುಪಡಿ ದಾಖಲಿಸಲು ಆರ್‌ಆರ್ ಶಿರಸ್ತೇದಾರರಿಗೆ ಸ್ವಯಂ ಚಾಲಿತವಾಗಿ ಕಳುಹಿಸಲ್ಪಡುತ್ತದೆ.

3. ಆರ್‌ಟಿಸಿಯಲ್ಲಿ ಭೂಪರಿವರ್ತನೆ ದಾಖಲಿಸಿಲ್ಲ. ಆಕಾರ್‌ಬಂದ್‌ನಲ್ಲಿ ಅಲಿನೇಷನ್ ಪೋಡಿ ದುರಸ್ಥಿಯಾಗಿಲ್ಲ. ಅರ್ಜಿದಾರರು ಆದೇಶದ ಪ್ರತಿ ಲಗತ್ತಿಸಿರುತ್ತಾರೆ.

    ಇಂತಹ ಪ್ರಕರಣಗಳಲ್ಲಿ ಅಲಿನೇಷನ್ ಆಗಿದ್ದು, ನಂತರದ ಪ್ರಕ್ರಿಯೆಗಳು ಪೂರೈಸಿರುವುದಿಲ್ಲ. ಅಲಿನೇಷನ್ ಆಗಿರುವುದು ಆದೇಶದಿಂದ ತಿಳಿದುಬಂದ ಕಾರಣ ಅಲಿನೇಷನ್ ಆಗಿದೆ ಎಂದು ದಾಖಲಿಸಬೇಕು. ನಂತರ ಇಂತಹ ಪ್ರಕರಣಗಳಲ್ಲಿ ಆರ್‌ಟಿಸಿಯಲ್ಲಿ ಭೂಪರಿವರ್ತನೆ ದಾಖಲಿಸಲು ಶಿರಸ್ತೇದಾರರಿಗೆ ಸ್ವಯಂ ಚಾಲಿತವಾಗಿ ಕಳುಹಿಸಲ್ಪಡುತ್ತದೆ. ಇಂತಹ ಪ್ರಕರಣಗಳಲ್ಲಿ ಸೂಪರ್‌ವೈಸರ್ ಅಲಿನೇಷನ್ ಆದೇಶದಂತೆ ಪೋಡಿ ಕ್ರಮ ಕೈಗೊಳ್ಳಬೇಕು.

4. ಆರ್.ಟಿ.ಸಿಯಲ್ಲಿ ಭೂಪರಿವರ್ತನೆ ದಾಖಲಿಸಿಲ್ಲ. ಆಕಾರ್‌ಬಂದ್‌ನಲ್ಲಿ ಅಲಿನೇಷನ್ ದುರಸ್ತಿಯಾಗಿರುವುದಿಲ್ಲ. ಅಲಿನೇಷನ್ ಆದೇಶ ಪ್ರತಿ ಸಹ ಲಭ್ಯವಿರುವುದಿಲ್ಲ.

    ಇಂತಹ ಸಂದರ್ಭದಲ್ಲಿ ಮೇಲ್ವಿಚಾರಕರು ಅಲಿನೇಷನ್ ಆಗಿಲ್ಲ ಎಂದು ದಾಖಲಿಸಬೇಕು.

ಈ ಮೇಲ್ಕಂಡಂತೆ ಸರ್ವೆಸೂಪರ್‌ವೈಸರ್‌ರವರು ಕ್ರಮ ತೆಗೆದುಕೊಂಡಲ್ಲಿ ರೈತರು ಅನಾವಶ್ಯಕವಾಗಿ ತಾಲ್ಲೂಕು ಕಛೇರಿಗೆ ತಿರುಗಾಡುವುದನ್ನು ತಪ್ಪಿಸಲಾಗುತ್ತದೆ. ಈ ವಿಚಾರದಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಮತ್ತೊಮ್ಮೆ ಸೂಚಿಸಿದೆ.

**(ರಾಜೀವ್ ಚಾವ್ಲ ಐಎಎಸ್)**
ಸರ್ಕಾರದ ವಿಶೇಷ ಕಾರ್ಯದರ್ಶಿಗಳು (ಭೂಮಿ)
ಕಂದಾಯ ಇಲಾಖೆ

**ಪ್ರತಿಗಳು;**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
2) ಆಯುಕ್ತರು, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಕೆ.ಆರ್.ವೃತ್ತ. ಬೆಂಗಳೂರು.
3) ಎಲ್ಲಾ ಪ್ರಾದೇಶಿಕ ಆಯುಕ್ತರು
4) ಎಲ್ಲಾ ಜಿಲ್ಲಾಧಿಕಾರಿಗಳು
5) ಎಲ್ಲಾ ಭೂ ದಾಖಲೆಗಳ ಉಪ ನಿರ್ದೇಶಕರು
6) ಎಲ್ಲಾ ಉಪವಿಭಾಗಾಧಿಕಾರಿಗಳು ಹಾಗೂ
7) ಎಲ್ಲಾ ತಹಶೀಲ್ದಾರರು.